# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಮಂಜುನಾಥ್ ಭಂಡಾರಿ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **984** |
| **ಉತ್ತರಿಸಬೇಕಾದ ದಿನಾಂಕ** | : | **27.12.2022** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದ ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ಇರುವ ನಿರ್ದೇಶಕರುಗಳ ಸಂಖ್ಯೆ ಎಷ್ಟು; (ಸಹಕಾರ ಸಂಸ್ಥೆವಾರು ಮತ್ತು ಮೀಸಲಾತಿವಾರು ವಿವರಗಳನ್ನು ನೀಡುವುದು).</td><td>ರಾಜ್ಯದ ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ಇರುವ ನಿರ್ದೇಶಕರುಗಳ ಸಂಖ್ಯೆ ಮತ್ತು ಮೀಸಲಾತಿ ವಿವರಗಳು ಈ ಕೆಳಕಂಡಂತಿದೆ.<br><table><tr><th>ಸಾಮಾನ್ಯ</th><th>ಪ.ಜಾತಿ</th><th>ಪ.ಪಂಗಡ</th><th>ಮಹಿಳಾ</th><th>ಹಿಂದುಳಿದ ವರ್ಗ</th><th>ಒಟ್ಟು</th></tr><tr><td>2,92,967</td><td>40,060</td><td>33,226</td><td>77,014</td><td>75,487</td><td>5,18,754</td></tr></table>ಸಹಕಾರ ಸಂಸ್ಥೆವಾರು ಮತ್ತು ಮೀಸಲಾತಿವಾರು ವಿವರಗಳ ಪಟ್ಟಿಯನ್ನು ಸಿ.ಡಿ.ಯಲ್ಲಿ ಮುದ್ರಿಸಿ ಸಲ್ಲಿಸಲಾಗಿದೆ. (ಸಿ.ಡಿಯನ್ನು ಇದರೊಂದಿಗೆ ಲಗತ್ತಿಸಿದೆ.)</td></tr>
<tr><td>(ಆ)</td><td>ರಾಜ್ಯದ ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆ ನಡೆಸಲಾಗುತ್ತಿದೆಯೇ; ನಡೆಸಲಾಗುತ್ತಿದ್ದರೆ ಎಷ್ಟು ಅವಧಿಗೊಮ್ಮೆ ನಡೆಸಲಾಗುತ್ತಿದೆ; (ವಿವರ ನೀಡುವುದು).</td><td>ರಾಜ್ಯದ ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆ ನಡೆಸಲಾಗುತ್ತಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 28-ಎ(4) ಪ್ರಕಾರ ಸಹಕಾರ ಸಂಘಗಳ ಆಡಳಿತ ಮಂಡಲಿಯ ಅಧಿಕಾರವಧಿಯು ಐದು ವರ್ಷವಾಗಿದ್ದು, ಅವಧಿ ಮುಕ್ತಾಯವಾದಂತೆ ಚುನಾವಣೆ ನಡೆಸಲಾಗುತ್ತಿದೆ.</td></tr>
<tr><td>(ಇ)</td><td>ರಾಜ್ಯದಲ್ಲಿ ವಿವಿಧ ಹಂತದ ವಿವಿಧ ರೀತಿಯ ಸಹಕಾರಿ ಸಂಘಗಳಲ್ಲಿ ನಿರ್ದೇಶಕರ ಸ್ಥಾನಕ್ಕೆ ಮೀಸಲಾತಿ ಇದೆಯೇ; ಇದ್ದರೆ, ಯಾವ ಯಾವ ವರ್ಗಗಳಿಗೆ ಎಷ್ಟು ಪ್ರತಿಶತ ಮೀಸಲಾತಿ ಇದೆ; (ಸಹಕಾರ ಸಂಘಗಳ ಹಂತವಾರು ವಿವರ ನೀಡುವುದು)</td><td>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28ಎ(3) ರ ಪ್ರಕಾರ ಬಿಡಿ ಸದಸ್ಯರು ಹೊಂದಿರುವ ಸಹಕಾರ ಸಂಘಗಳಲ್ಲಿ ಕೆಳಕಂಡಂತೆ ಮೀಸಲಾತಿಯ ಅವಕಾಶವನ್ನು ಕಲ್ಪಿಸಲಾಗಿದೆ:-<br><u>ಪ್ರಕರಣ 28ಎ(3)</u><br>(i) ಪರಿಶಿಷ್ಟ ಜಾತಿ ವರ್ಗದವರಿಗೆ ಒಂದು ಸ್ಥಾನವನ್ನು, ಪರಿಶಿಷ್ಟ ಪಂಗಡದವರಿಗೆ ಒಂದು ಸ್ಥಾನವನ್ನು ಮೀಸಲಿರಿಸಲಾಗಿದೆ.<br>(ii) ಎರಡು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ.<br>(iii) ಎರಡು ಸ್ಥಾನಗಳನ್ನು ಹಿಂದುಳಿದ ವರ್ಗದ ಸದಸ್ಯರಿಗೆ ಪ್ರವರ್ಗ 'ಎ' ಮತ್ತು 'ಬಿ' ಗಳಿಂದ ಭರ್ತಿ ಮಾಡತಕ್ಕದ್ದು.</td></tr>
</table>

| | | |
|---|---|---|
| (ಈ) | ರಾಜ್ಯದ ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಮತ್ತು ಅಪೆಕ್ಸ್ ಬ್ಯಾಂಕುಗಳಲ್ಲಿ ನಿರ್ದೇಶಕರ ಸ್ಥಾನಕ್ಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಮೀಸಲಾತಿ ಇದೇಯೇ: ಇದ್ದರೆ ನೀಡಲಾಗುವ ಮೀಸಲಾತಿ ಎಷ್ಟು: (ವಿವರಗಳನ್ನು ನೀಡುವುದು) | ರಾಜ್ಯದ ಫೆಡರಲ್ ಸಹಕಾರ ಸಂಸ್ಥೆಗಳು/ಜಿಲ್ಲಾ ಸಹಕಾರಿ ಬ್ಯಾಂಕುಗಳು/ಅಪೆಕ್ಸ್ ಬ್ಯಾಂಕುಗಳಲ್ಲಿ ಕಂಡಿಕೆ (ಇ)ರಲ್ಲಿ ನಮೂದಿಸಿರುವ ರೀತ್ಯಾ ಮೀಸಲಾತಿ ಕಲ್ಪಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ಕ್ಕೆ ತಿದ್ದುಪಡಿ ಪ್ರಸ್ತಾಪಿಸಿ ವಿಧೇಯಕವು ವಿಧಾನಮಂಡಲದಲ್ಲಿ ಅನುಮೋದನೆಗೊಂಡು ಘನತೆವೆತ್ತ ರಾಜ್ಯಪಾಲರ ಒಪ್ಪಿಗೆಗೆ ಬಾಕಿ ಇರುತ್ತದೆ. |
| (ಉ) | ರಾಜ್ಯದ ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮತ್ತು ಮಹಿಳಾ ವರ್ಗಗಳಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಯ್ಕೆಯಾಗಿದ್ದಾರೆಯೇ? | ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಲ್ಲಿ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಆದರೆ, ವಿವಿಧ ಸಹಕಾರಿ ಬ್ಯಾಂಕು ಮತ್ತು ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಮತ್ತು ಮಹಿಳಾ ವರ್ಗಗಳಿಂದ ಆಯ್ಕೆಗೊಂಡ ನಿರ್ದೇಶಕರುಗಳು ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಾಗಿ ಆಯ್ಕೆಗೊಂಡಿರುತ್ತಾರೆ. |

**ಸಂಖ್ಯೆ: ಸಿಒ 127 ಸಿಎಲ್ಎಂ 2022**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**